<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ</u>

ಸಿ.ಸಿ.ನಂಃ 74/2017

ಪ್ರಾಸಾ ( 06 )

ದಿನಾಂಕಃ 22-10-2024 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆಃ ಸಸಅ ರವರಿಂದ:**

ಈ ಪ್ರಕರಣದ ಕುರಿತು ಚಾಸಾ 13 ರವರು ಆರೋಪಿಗಳನ್ನು ವಿಚಾರಿಸಿದಾಗ ಈ ಪ್ರಕರಣದ ವಸ್ತುಗಳ ಜೊತೆ ಕೊಪ್ಪಳ ನಗರ ಠಾಣೆಯ ಗುನ್ನ ನಂ. 125/2014, ಮುನಿರಬಾದ್ ಠಾಣೆಯ ಗುನ್ನ ನಂ. 113/2014, ಮುನಿರಬಾದ್ ಠಾಣೆಯ ಗುನ್ನ ನಂ. 168/2015, ಮುನಿರಬಾದ್ ಠಾಣೆಯ ಗುನ್ನ ನಂ. 75/2015, ಮುನಿರಬಾದ್ ಠಾಣೆಯ ಗುನ್ನ ನಂ. 05/2016, ಯಲಬುರ್ಗಾ ಠಾಣೆಯ ಗುನ್ನ ನಂ. 15/2016, ಮುನಿರಬಾದ್ ಠಾಣೆಯ ಗುನ್ನ ನಂ. 47/2017 ರಲ್ಲಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ತಿಂಗಳು 10 ದಿನಗಳ ಹಿಂದೆ 1 ರಿಂದ 4 ನೇ ಆರೋಪಿತರು ಸೇರಿಕೊಂಡು ಹಿರೇಬೊಮ್ಮನಾಳ ಸರ್ಕಾರಿ ಶಾಲೆಯಲ್ಲಿ ರಾತ್ರಿಯ ವೇಳೆಯಲ್ಲಿ ಟಾಟ ಮ್ಯಾಜಿಕ್ ವಾಹನದಲ್ಲಿ ಕಳ್ಳತನ ಮಾಡಲು ಬಂದಿದ್ದು, ಒಂದು ಕಂಪ್ಯೂಟರ್ ಮಾನಿಟರ್, ಒಂದು ಎಲ್ ಸಿ ಡಿ ಟಿ ವಿ, ಒಂದು ಸಿ ಪಿ ಯು, ಎರಡು ಜೊತೆ ಲೂನಾರ್ಸ್ ಶೂ ಗಳು, ಒಂದು ಪ್ರಿಂಟರ್, ಒಂದು ಮೈಕ್, ಒಂದು ಆ್ಯಂಪ್ಲಿಯರ್, ಎರಡು ಯುಪಿ ಎಸ್ ಬ್ಯಾಟರಿಗಳನ್ನು ಕಳ್ಳತನ ಮಾಡಿರುವ ಕುರಿತು ತಿಳಿಸಿರುತ್ತಾರೆ.

2. ಈ ಪ್ರಕರಣಕ್ಕೆ ಮತ್ತು ಠಾಣಾ ಗುನ್ನ ನಂ. 98/2016 ರ ಪ್ರಕರಣಕ್ಕೆ ಸಂಬಂಧಿಸಿದ ಈ ಮೇಲೆ ಹೇಳಿದ ವಸ್ತುಗಳನ್ನು ಆರೋಪಿಗಳಿಂದ ಜಪ್ತಿಮಾಡಿಕೊಂಡು ನಮ್ಮ ತಾಬಾಕ್ಕೆ ಪಡೆದುಕೊಂಡು ಆರೋಪಿಗಳನ್ನು ಗುನ್ನನಂ. 98/2016 ರ ಪ್ರಕರಣದಲ್ಲಿ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಹಾಜರು ಪಡಿಸಲಾಗಿರುತ್ತದೆ. ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿಃ 21-06-2016 ರಂದು ಚಾಸಾ 13 ರವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮು.ಮಾ 1 ರಿಂದ 10 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.